# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)

(ಹಿಂದಿನ ಹೆಸರು ಕರ್ನಾಟಕ ಭೂಸೇನಾ ನಿಗಮ ನಿಯಮಿತ)

"ಗ್ರಾಮೀಣಾಭಿವೃದ್ಧಿ ಭವನ"4ನೇ ಮತ್ತು 5ನೇ ಮಹಡಿ, ಆನಂದ ರಾವ್ ವೃತ್ತ, ಬೆಂಗಳೂರು – 560 009

ಸಂ:ಕೆಆರ್‌ಐಡಿಎಲ್/ಕಾಮಗಾರಿ/ಡಿಕ್ಯೂಎಂ ಎಂಪ್ಯಾನಲ್‌ಮೆಂಟ್/2017–18 ದಿನಾಂಕ: 7/6/2017

## ಮರು ಟೆಂಡರ್

**ಜಿಲ್ಲಾ ಗುಣನಿಯಂತ್ರಣ ಮಾನಿಟರ್(DQM) ಗಳನ್ನು Empanelment ಮಾಡಿಕೊಳ್ಳಲು ಅರ್ಜಿಗಳ ಆಹ್ವಾನ**

ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ ಸಂಸ್ಥೆಯ ವತಿಯಿಂದ ಕಟ್ಟಡ, ರಸ್ತೆ, ನೀರು ಸರಬರಾಜು, ವಿದ್ಯುತ್ ಚಕ್ತಿ ಒಳಗೊಂಡಂತಹ, ಹಲವಾರು ಯೋಜನೆಯ ಕಾಮಗಾರಿಗಳನ್ನು ಸರ್ಕಾರದ ಇಲಾಖಾ ವತಿಯಿಂದ ವಹಿಸಿಕೊಂಡು ನಿರ್ವಹಿಸಲಾಗುತ್ತಿದೆ.

ಸಂಸ್ಥೆಯಲ್ಲಿ ಮೂರು ಹಂತದ ಗುಣನಿಯಂತ್ರಣ ವ್ಯವಸ್ಥೆ ಹೊಂದಿದ್ದು, ಎರಡನೇ ಹಂತದಲ್ಲಿ ಕಾಮಗಾರಿಗಳ ಪರಿವೀಕ್ಷಣೆ ಮಾಡಲು ಗುಣನಿಯಂತ್ರಕರ ಅರ್ಜಿಗಳನ್ನು ಕರೆಯಲಾಗಿದ್ದು, ಭಾಗವಹಿಸುವ ಆಸಕ್ತರು ಪಾಲಿಸಬೇಕಾದ ನಿಯಮ ಮತ್ತು ನಿಭಂದನೆಗಳು.

1. ಗುಣನಿಯಂತ್ರಣ ಮಾನಿಟರ್‌ಗಳು ಸಾರ್ವಜನಿಕ ಸೇವೆಯನ್ನು ಮಾಡಲು ಉತ್ಸುಕರಾಗಿದ್ದು, ಸಮಾಜದ ಏಳಿಗೆಗಾಗಿ ಶ್ರಮಿಸುವವರಾಗಿರಬೇಕು ಹಾಗೂ ದೈಹಿಕವಾಗಿ ಆರೋಗ್ಯವಂತರಾಗಿರಬೇಕು.
2. ಗುಣನಿಯಂತ್ರಣ ಮಾನಿಟರ್‌ಗಳನ್ನು ಆಯ್ಕೆ ಸಮಿತಿಯಿಂದ ತಾಂತ್ರಿಕ ಮಾನದಂಡಗಳನ್ವಯ ಆಯ್ಕೆ ಮಾಡಲಾಗುವುದು.
3. ಗುಣ ನಿಯಂತ್ರಣ ಮಾನಿಟರ್‌ಗಳನ್ನು ಪ್ರತಿ ಮಾಹೆ 3 ರಿಂದ 5 ದಿನಗಳವರೆಗೆ ನಿಯೋಜಿತ ಜಿಲ್ಲೆಗಳಿಗೆ ತೆರಳಿ ಕಾಮಗಾರಿಗಳನ್ನು ಮಾರ್ಗಸೂಚಿಯಂತೆ ಪರಿವೀಕ್ಷಿಸಿ ನಿಗದಿತ ನಮೂನೆಯಲ್ಲಿ ವರದಿ ಸಲ್ಲಿಸಬೇಕಾಗಿರುತ್ತದೆ.
4. 68 ವರ್ಷಕ್ಕಿಂತ ಕಡಿಮೆ ಇರುವ ಅರ್ಹ ವ್ಯಕ್ತಿಗಳು ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಗುಣ ನಿಯಂತ್ರಣ ಮಾನಿಟರ್‌ಗಳು 70 ವರ್ಷ ತುಂಬುವವರೆಗೂ ಕಾರ್ಯ ನಿರ್ವಹಿಸಬಹುದಾಗಿರುತ್ತದೆ. ಗುಣನಿಯಂತ್ರಣ ಮಾನಿಟರ್‌ಗಳ ಪರಿವೀಕ್ಷಣಾ ವರದಿಗಳನ್ನು 6 ತಿಂಗಳಿಗೊಮ್ಮೆ ಮೌಲ್ಯಮಾಪನ ನಡೆಸಲಾಗುವುದು.
5. ಗರಿಷ್ಠ ವಯೋಮಿತಿ ಮೀರಿದ ನಂತರ ಅಥವಾ ಅಸಮರ್ಪಕ ಕಾರ್ಯನಿರ್ವಹಣೆ ಕಂಡುಬಂದಲ್ಲಿ ಅಂತಹ ಮಾನಿಟರ್‌ಗಳನ್ನು ಪ್ಯಾನಲ್‌ನಿಂದ ಕೈಬಿಡಲಾಗುವುದು.
6. Rural Roads/Highways/Bridges/Culverts/Water Supply ಇತರೆ Civil ಕಾಮಗಾರಿಗಳ ನಿರ್ಮಾಣದಲ್ಲಿ ಅನುಭವ ಹಾಗೂ Construction Materials/Geo-Technical/Structural ಬಗ್ಗೆ ಮಾನಿಟರ್‌ಗಳಿಗೆ ಆಳವಾದ ಜ್ಞಾನವಿರಬೇಕು.
7. ಗುಣನಿಯಂತ್ರಣ ಮಾನಿಟರ್‌ಗಳು
   - State Government/Central Government/Defence Service/Border Roads Organization/Central and state Public sector under takings ಗಳಿಂದ ನಿವೃತ್ತರಾದ/ಸೇವೆ ಸಲ್ಲಿಸಿದ ಕಾರ್ಯಪಾಲಕ ಇಂಜಿನಿಯರ್‌ಗಳಾಗಿರಬೇಕು
   - ಸಂಸ್ಥೆ/ಕಂಪನಿಯಲ್ಲಿ ಸಿವಿಲ್ ತಾಂತ್ರಿಕ ಕೆಲಸ ನಿರ್ವಹಿಸಿ ನಿವೃತ್ತಿ ಹೊಂದಿದ/Mtech/Phd ಹೊಂದಿದ ವ್ಯಕ್ತಿಯಾಗಿರತಕ್ಕದ್ದು
   - ಪ್ರಾಧ್ಯಾಪಕರು/ಉಪ-ಪ್ರಾಧ್ಯಾಪಕರು, ಸಿವಿಲ್ ಇಂಜಿನಿಯರಿಂಗ್ ವಿದ್ಯಾಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿದವರಾಗಿರತಕ್ಕದ್ದು
8. ಗುಣನಿಯಂತ್ರಣ ಮಾನಿಟರ್‌ಗಳಿಗೆ ಪ್ರತಿ ಪರಿವೀಕ್ಷಣಾ ಪ್ರವಾಸದ ಗೌರವಧನ ರೂ.2000 ಪ್ರತಿ ದಿನಕ್ಕೆ ಹಾಗೂ ದಿನ ಭತ್ಯೆ ರೂ.250.00 ಪ್ರತಿ ದಿನಕ್ಕೆ ಮತ್ತು ಪ್ರಾಸಂಗಿಕ ಭತ್ಯೆ ರೂ.250.00(Incidental Charge), ವರದೀಕರಣ ಭತ್ಯೆ ರೂ.250.00 ಗಳನ್ನು ಪ್ರತಿ ಪ್ರವಾಸಕ್ಕೆ ಹಾಗೂ ಸಾಮಾನ್ಯ ಸಾರಿಗೆ/ಎ.ಸಿ ಬಸ್ಸು ಸಾರಿಗೆ/ಎ.ಸಿ ತ್ರಿಟೈರ್ ರೈಲು ಪ್ರಯಾಣದ ವಾಸ್ತವಿಕ ಭತ್ಯೆಗಳನ್ನು ಮಾತ್ರ ನೀಡಲಾಗುವುದು ಮತ್ತು ವಸತಿ ವ್ಯವಸ್ಥೆಯನ್ನು IB ಕಟ್ಟಡಗಳಲ್ಲಿ/ ಹೊಟೆಲ್‌ಗಳಲ್ಲಿ ಪ್ರಾಜೆಕ್ಟ್ ವತಿಯಿಂದ ಕಲ್ಪಿಸಿಕೊಡಲಾಗುವುದು. ಸಭೆಗಳಿಗೆ ಹಾಜರಿದ್ದಲ್ಲಿ ರೂ.2000 ಗೌರವಧನ ನೀಡಲಾಗುವುದು.
9. ಈಗಾಗಲೇ ಕೆ.ಆರ್.ಐ.ಡಿ.ಎಲ್. ನಲ್ಲಿ Empanel ಆಗಿರುವ ಜಿಲ್ಲಾ ಗುಣನಿಯಂತ್ರಣ ಮಾನಿಟರ್‌ರವರು ಸಹ ಪುನಃ ಹೊಸದಾಗಿ ಅರ್ಜಿ ಸಲ್ಲಿಸುವುದು.
10. ಅರ್ಜಿಗಳನ್ನು ಒಪ್ಪುವ ಅಥವಾ ತಿರಸ್ಕರಿಸುವ ಸಂಪೂರ್ಣ ಹಕ್ಕು ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ ಸಂಸ್ಥೆಗೆ ಇರುತ್ತದೆ.
11. ಗುಣನಿಯಂತ್ರಣ ಮಾನಿಟರ್‌ಗಳು
   - ಕಾರ್ಯಪಾಲಕ ಅಭಿಯಂತರರು (ನಿವೃತ್ತ) ಇವರು ನಿವೃತ್ತಿ ಹೊಂದಿದ ಇಲಾಖೆಯಿಂದ ಯಾವುದೆ ಇಲಾಖೆ ವಿಚಾರಣೆ ಇಲ್ಲದಿರುವ ಕುರಿತು ಪ್ರಮಾಣ ಪತ್ರ ಸಲ್ಲಿಸುವುದು,
   - ತಾಂತ್ರಿಕ ವಿದ್ಯಾ ಸಂಸ್ಥೆಯ ಪ್ರಾಧ್ಯಾಪಕರು/ಉಪ ಪ್ರಾಧ್ಯಾಪಕರು ಸಂಬಂಧಿಸಿದ ತಾಂತ್ರಿಕ ಕಾಲೇಜ್ ನಿಂದ ನಿರಾಪೇಕ್ಷಣ ಪ್ರಮಾಣ ಪತ್ರ ಸಲ್ಲಿಸುವುದು
   - ಸಂಸ್ಥೆ/ಕಂಪನಿಯಿಂದ ಪ್ರತಿನಿಧಿಸುವ ಅರ್ಜಿದಾರರು ವಿದ್ಯಾರ್ಹತೆ, ಅನುಭವದ, ರಿಜಿಸ್ಟ್ರೇಶನ್ ಸರ್ಟಿಫಿಕೇಟ್ ಪ್ರಮಾಣ ಪತ್ರಸಲ್ಲಿಸುವುದು ಸಲ್ಲಿಸುವುದು.

ಸಂಸ್ಥೆಯ ವೆಬ್ ಸೈಟ್‌ನಲ್ಲಿ ನೀಡಿರುವ ನಮೂನೆಯಲ್ಲಿ ಕ.ಗ್ರಾ.ಮೂ.ಸೌ.ನಿ. ಸಂಸ್ಥೆ ಬೆಂಗಳೂರುಗೆ ದಿ: 6/7/2017 ರೊಳಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ನಂತರ ಬರುವ ಅರ್ಜಿಗಳನ್ನು ಮುಂದಿನ ದಿನಗಳಲ್ಲಿ ಪರಿಗಣಿಸಲಾಗದು. ಹೆಚ್ಚಿನ ವಿವರಗಳು ಅವಶ್ಯವಿದ್ದಲ್ಲಿ ಈ ಸಂಸ್ಥೆಯ www.kridl.org Website ಮೂಲಕ ಪಡೆಯಬಹುದಾಗಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು

ಕೆಆರ್‌ಐಡಿಎಲ್,ಬೆಂಗಳೂರು.

# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)

(ಹಿಂದಿನ ಹೆಸರು ಕರ್ನಾಟಕ ಭೂಸೇನಾ ನಿಗಮ ನಿಯಮಿತ)

"ಗ್ರಾಮೀಣಾಭಿವೃದ್ಧಿ ಭವನ"4ನೇ ಮತ್ತು 5ನೇ ಮಹಡಿ, ಆನಂದ ರಾವ್ ವೃತ್ತ, ಬೆಂಗಳೂರು – 560 009

ಸಂ:ಕೆಆರ್‌ಐಡಿಎಲ್/ಡಬ್ಲ್ಯೂಕೆಎಸ್/ಡಿಕ್ಯೂಎಂ ಎಂಪ್ಯಾನಲ್‌ಮೆಂಟ್/2017-18 ದಿನಾಂಕ: 7/6/2017

## ಮರು ಟೆಂಡರು

**ಜಿಲ್ಲಾ ಗುಣಮಟ್ಟ ವೀಕ್ಷಣೆಯ ಎಂಪ್ಯಾನಲ್‌ಮೆಂಟ್‌ಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ**

ಕೆಆರ್‌ಐಡಿಎಲ್ ನಿಂದ ನಿರ್ವಹಿಸಲಾಗುತ್ತಿರುವ ವಿವಿಧ ಕಾಮಗಾರಿಗಳಲ್ಲಿ ಗುಣನಿಯಂತ್ರಣ ವ್ಯವಸ್ಥೆಯ ಸಂಬಂಧ ರಾಜ್ಯ ಸರ್ಕಾರದ/ಕೇಂದ್ರ ಸರ್ಕಾರದ/ ರಕ್ಷಣಾಸೇವೆ/ ಕೇಂದ್ರ ಅಥವಾ ರಾಜ್ಯ ಸರ್ಕಾರದ ಸಾರ್ವಜನಿಕ ಉದ್ದಿಮೆಗಳಿಂದ ನಿವೃತ್ತರಾದ ಕಾರ್ಯಪಾಲಕ ಅಭಿಯಂತರರುಗಳಿಂದ, ಇಂಜಿನಿಯರಿಂಗ್ ಕಾಲೇಜುಗಳ ಪ್ರೊಫೆಸರ್‌ಗಳು/ಸಹಾಯಕ ಪ್ರೊಫೆಸರ್‌ಗಳು/ತಾಂತ್ರಿಕ ಕನ್ಸಲಟ್‌ಟೆಂಟ್/ಸಿವಿಲ್ ಇಂಜಿನಿಯರಿಂಗ್ ಕಂಪನಿಗಳಿಂದ ಗುಣಮಟ್ಟ ನಿಯಂತ್ರಣ ಹಾಗೂ ಕೆಲಸದ ಮೇಲ್ವಿಚಾರಣೆಯಲ್ಲಿ 10 ವರ್ಷಗಳ ಅನುಭವವನ್ನು ಹೊಂದಿರುವವರಿಂದ ಎರಡನೇ ಹಂತದಲ್ಲಿ ತಪಾಸಣೆಗೆ ಜಿಲ್ಲಾ ಗುಣನಿಯಂತ್ರಣ ಮಾನಿಟರ್‌ಗಳ ಎಂಪ್ಯಾನಲ್‌ಮೆಂಟ್‌ಗಾಗಿ ಈ ಹಿಂದೆ ದಿನಾಂಕ:16.03.2017 ರಂದು ಅರ್ಜಿಗಳನ್ನು ಆಹ್ವಾನಿಸಿದ್ದು ತಾಂತ್ರಿಕ ಕಾರಣಗಳಿಂದ ಅದನ್ನು ರದ್ದುಗೊಳಿಸಿದ್ದು, ಮತ್ತೊಮ್ಮೆ ಹೂಸದಾಗಿ ಅರ್ಜಿಗಳನ್ನು ಆಹ್ವಾನಿಸಿದೆ.

ಎಂಪ್ಯಾನಲ್‌ಮೆಂಟ್‌ನಲ್ಲಿ ಆಸಕ್ತಿ ಹೊಂದಿರುವವರು ಕೆ.ಆರ್.ಐ.ಡಿ.ಎಲ್ ವೆಬ್‌ಸೈಟ್‌ನಲ್ಲಿ: www.kridl.org ನಿಂದ ನಿಗದಿತ ಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಂಡು ಹಾಗೂ ಇತರೆ ವಿವರಗಳನ್ನು ಗಮನಿಸಿ ಭರ್ತಿಮಾಡಿದ ಅರ್ಜಿಗಳನ್ನು ದಿನಾಂಕ: 6/7/2017 ರ 4.00 ಘಂಟೆಯೊಳಗಾಗಿ ಕೆ.ಆರ್.ಐ.ಡಿ.ಎಲ್ ಕೇಂದ್ರ ಕಛೇರಿಗೆ ತಲುಪುವಂತೆ ಸಲ್ಲಿಸುವುದು ನಿಗದಿತ ದಿನಾಂಕದ ನಂತರ ಬರುವಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**ಹೆಚ್ಚಿನ ವಿವರಗಳಿಗೆ ದಯವಿಟ್ಟು ಸಂಪರ್ಕಿಸಿ:**

ಮುಖ್ಯ ಅಭಿಯಂತರರು (ಉತ್ತರ), ಕೆಆರ್‌ಐಡಿಎಲ್, ಬೆಂಗಳೂರು.

ದೂರವಾಣಿ:080-28015605, 28015647

ವ್ಯವಸ್ಥಾಪಕ ನಿರ್ದೇಶಕರು

ಕೆಆರ್‌ಐಡಿಎಲ್,ಬೆಂಗಳೂರು.

ಪಾಸ್ ಪೋರ್ಟ್
ಭಾವ ಚಿತ್ರ
ಅಂಟಿಸುವುದು

# ಜಿಲ್ಲಾ ಗುಣನಿಯಂತ್ರಕರ ನೊಂದಣಿಗಾಗಿ ಅರ್ಜಿ ನಮೂನೆ

1. ಅರ್ಜಿದಾರರ ಹೆಸರು :
2. ತಂದೆ/ಗಂಡ/ಸಂಸ್ಥೆ/ಕಂಪನಿ/ವಿದ್ಯಾಸಂಸ್ಥೆಯ ಹೆಸರು :
3. ಈಗಿನ ವಿಳಾಸ/ಸಂಸ್ಥೆ/ಕಂಪನಿ/ವಿದ್ಯಾಸಂಸ್ಥೆಯ ವಿಳಾಸ:
   (ಪುರಾವೆ ಲಗತ್ತಿಸುವುದು)
4. ಖಾಯಂ ವಿಳಾಸ/ಸಂಸ್ಥೆ/ಕಂಪನಿ/ವಿದ್ಯಾಸಂಸ್ಥೆ :
   (ಪುರಾವೆ ಲಗತ್ತಿಸುವುದು)
5. ಹುಟ್ಟಿದ ದಿನಾಂಕ ಹಾಗೂ ವಯಸ್ಸು/ :
   ಸಂಸ್ಥೆ/ಕಂಪನಿ ನೊಂದಣಿ ದಿನಾಂಕ/ಪ್ರಾ/ಉಪ್ರಾ
6. ವಿದ್ಯಾರ್ಹತೆ/ಸಂಸ್ಥೆ ಮುಖ್ಯಸ್ಥ/ಕಂಪನಿ ಮುಖ್ಯಸ್ಥ/ :
   ಪ್ರಾಧ್ಯಾಪಕರು/ಉಪ-ಪ್ರಾಧ್ಯಾಪಕರ(ಪುರಾವೆ ಲಗತ್ತು)
7. ಸೇವೆಗೆ ಸೇರಿದ ದಿನಾಂಕ ಮತ್ತು ಹೊಂದಿದ ಹುದ್ದೆ :
8. ನಿವೃತ್ತಿ ಪೂರ್ವದಲ್ಲಿದ್ದ/ಹಾಲಿ ಹೊಂದಿರುವ
   ಹುದ್ದೆ(ಸಂಸ್ಥೆ/ಕಂಪನಿ/ತಾ.ವಿ.ಸಂ) :
9. ನಿವೃತ್ತಿಯಾಗಿದಲ್ಲಿ ದಿನಾಂಕ :
10. ದೂರವಾಣಿ ಸಂಖ್ಯೆ :
    ಇ-ಮೇಲ್ :
11. ಪ್ಯಾನ್ ಕಾರ್ಡ್ ಸಂಖ್ಯೆ :
12. ಗುಣನಿಯಂತ್ರಣದ ಬಗ್ಗೆ ಗುರಿ ಮತ್ತು ದೃಷ್ಟಿಕೋನ :
    (50 ಪದಗಳು ಮೀರದಂತೆ)
13. ಅನುಭವದ ಬಗ್ಗೆ ವಿವರ

| ಕ್ರ ಸಂ. | ಇಲಾಖೆ | ಹುದ್ದೆ | ನಿಗಧಿಪಡಿಸಿದ್ದ ಕರ್ತವ್ಯಗಳು | ಅವಧಿ | ವಿವಿಧ ಹುದ್ದೆಗಳಲ್ಲಿ ನಿರ್ವಹಿಸಿದ ಕಾಮಗಾರಿಗಳ ವಿವರಗಳು |
|---|---|---|---|---|---|
| | | | | | |

(ಅಗತ್ಯತೆಯಿದ್ದಲ್ಲಿ ಹೆಚ್ಚುವರಿ ವಿವರಗಳನ್ನು ಇದರೊಂದಿಗೆ ಪ್ರತ್ಯೇಕವಾಗಿ ಲಗತ್ತಿಸುವುದು)

1. ಶ್ರೀ ______________ ಆದ ನಾನು ಪ್ರಮಾಣಿಕರಿಸುವುದೇನೆಂದರೆ ಮೇಲೆ ನೀಡಿರುವ ಎಲ್ಲಾ ವಿವರಗಳನ್ನು ನನ್ನ ತಿಳವಳಿಕೆ ಹಾಗೂ ನಂಬಿಕೆಯಂತೆ ಸತ್ಯವಾಗಿರುತ್ತವೆ. ಒಂದು ವೇಳೆ ನಾನು ತಪ್ಪು ಮಾಹಿತಿಗಳನ್ನು ಸರ್ಕಾರ/ಸಂಸ್ಥೆಗೆ ನೀಡಿದ್ದಲ್ಲಿ ಕಾನೂನು ರೀತಿಯ ಕ್ರಮಕ್ಕೆ ಒಳಪಡುತ್ತೇನೆಂಬ ಅರಿವು ನನಗೆ ಇರುತ್ತದೆ.
2. ಶ್ರೀ______________ ಆದ ನಾನು ಪ್ರಮಾಣಿಕರಿಸುವುದೇನೆಂದರೆ ನನ್ನ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಬಾಕಿ ಇರುವುದಿಲ್ಲ ಹಾಗೂ ನನ್ನಿಂದ ಸೇವೆ ಸಲ್ಲಿಸಿದ ಇಲಾಖೆ/ಸಂಸ್ಥೆ/ಕಂಪನಿ/ ತಾಂತ್ರಿಕ ವಿದ್ಯಾಸಂಸ್ಥೆಗಳಿಗೆ ಯಾವುದೇ ಬಾಕಿ ನೀಡಬೇಕಾಗಿರುವುದಿಲ್ಲ.(ಇಲಾಖೆಯಿಂದ ನೀಡಿರುವ ಬೇಬಾಕಿ ಪ್ರಮಾಣ ಪತ್ರ ಲಗತ್ತಿಸುವುದು.)

ದಿನಾಂಕ:

ಸ್ಥಳ:

ಅರ್ಜಿದಾರರ ಸಹಿ